ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜುಲೈ 31, 2020

# ಪತ್ರಿಕಾ ಆಮಂತ್ರಣ

**1. ಭೂ ಸುಧಾರಣೆ (ತಿದ್ದುಪಡಿ) ಅಧ್ಯಾದೇಶ 2020 ಸಾಧಕ ಹಾಗೂ ಬಾಧಕಗಳು ಕುರಿತು ಜೂಮ್ ಆನ್ ಲೈನ್‌ನಲ್ಲಿ ಸಂವಾದ ಹಾಗೂ ಚರ್ಚೆ :**

ಜೆ.ಸಿ. ಮಾಧುಸ್ವಾಮಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ದಿನಾಂಕ : 1–08–2020 ಶನಿವಾರ ಬೆಳಿಗ್ಗೆ 10–30 ಗಂಟೆಗೆ

**ZOOM ID : 85036098199**

**ZOOM PASSWORD : ULC 123**

**2. ಸಾರ್ವಜನಿಕ ಗ್ರಂಥಾಲಯ ನೂತನ ಕಟ್ಟಡ ಉದ್ಘಾಟನೆ :**

ಎಸ್. ಸುರೇಶ್‌ಕುಮಾರ್,

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ದಿನಾಂಕ : 03–08–2020 ಸೋಮವಾರ ಸಮಯ : ಬೆಳಿಗ್ಗೆ 10–30 ಗಂಟೆಗೆ

ಸ್ಥಳ : ಬಿ.ಟಿ.ಎಂ. ಬಡಾವಣೆ , 2 ನೇ ಹಂತ 10 ನೇ ಅಡ್ಡರಸ್ತೆ,

ಸಿ.ಎ. ನಿವೇಶನ ಸಂಖ್ಯೆ 10, ಬೆಂಗಳೂರು

**3. Floral Gallery of Himalayan Valley of Flowers and Adjacent Areas Book Release Function :**

**K.R. Keshava Murthy,**
**Texanomist Honorary Editor of My Forest**

**Date : 03-08-2020 Monday  Time : 11.00 A.M.**
**Venue : 8th Floor, Aranya Bhavan, 18th Cross,**
**Malleswaram, Bengaluru**

# ಪತ್ರಿಕಾ ಪ್ರಕಟಣೆ

## ಭೂ ಸುಧಾರಣೆ (ತಿದ್ದುಪಡಿ) ಅಧ್ಯಾದೇಶ 2020 ಸಾಧಕ ಹಾಗೂ ಬಾಧಕಗಳು ಕುರಿತು ಜೂಮ್ ಆನ್ ಲೈನ್‌ನಲ್ಲಿ ಸಂವಾದ ಹಾಗೂ ಚರ್ಚೆ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಬೆಂಗಳೂರು ವಿಶ್ವವಿದಾಲಯ ಕಾನೂನು ಕಾಲೇಜು ವತಿಯಿಂದ ರಾಜ್ಯಮಟ್ಟದ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಅಧ್ಯಾದೇಶ 2020 ಸಾಧಕ ಹಾಗೂ ಬಾದಕಗಳು ಎಂಬ ವಿಷಯದ ಸಂವಾದ ಹಾಗೂ ಚರ್ಚೆಯನ್ನು ಆಗಸ್ಟ್ 1. 2020 ರಂದು ಬೆಳಿಗ್ಗೆ 10–30 ಗಂಟೆಗೆ ಜೂಮ್ ಆನ್‌ಲೈನ್‌ನಲ್ಲಿ ಆಯೋಜಿಸಲಾಗಿದೆ.

ಈ ಸಂವಾದ ಜೂಮ್ ಆನ್‌ಲೈನ್‌ನಲ್ಲಿ ನಡೆಯಲಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಪಾಲ್ಗೊಳ್ಳುವರು. ಕಾರ್ಯಕ್ರಮದ ಸಂಯೋಜನೆಯನ್ನು ಡಾ: ಎನ್ . ಸತೀಶ್ ಗೌಡ, ಸಹಾಯಕ ಪ್ರಾಧ್ಯಾಪಕರು ನೆರವೇರಿಸಲಿದ್ದಾರೆ. ಆನ್‌ಲೈನ್ **ZOOM ID : 85036098199, ZOOM PASSWORD : ULC 123** ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ **9916007211** ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

## ಹೊಸ ಶಿಕ್ಷಣ ನೀತಿ ಸಚಿವ ಸಿ.ಟಿ. ರವಿ ಅಭಿನಂದನೆ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಶಾಲಾ ಶಿಕ್ಷಣಕ್ಕೆ 4 ಹಂತ ರೂಪಿಸಿ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿದ ಕ್ರಮ “ಹಳೆ ಬೇರು ಹೊಸ ಚಿಗುರು ಕೂಡಿರಲು ಮರಸೊಬಗು” ಎಂಬ ಕವಿವಾಣಿಯಂತೆ ಮಾತೃಭಾಷೆ ರಾಜ್ಯಭಾಷೆ ಸ್ಥಳೀಯ ಜ್ಞಾನದ ಜೊತೆಜೊತೆಗೆ

ಜಾಗತಿಕ ಸವಾಲುಗಳನ್ನು ಎದುರಿಸುವ ಕೃಷಿಯನ್ನು ವಿಜ್ಞಾನವಾಗಿ ನೋಡುವ ಆರನೇ ತರಗತಿ ಇಂದಲೇ ವೃತ್ತಿ, ಶಿಕ್ಷಣಕ್ಕೆ ನೀಡಿರುವ ಒತ್ತು ನಿರುದ್ಯೋಗ ನಿವಾರಿಸಿ ಸ್ವಾವಲಂಭನೆಗೆ ದಾರಿ ಮಾಡುತ್ತದೆ. ಸ್ವಾವಲಂಬಿ ಬದುಕು ರೂಪಿಸದ ನಿರುದ್ಯೋಗ ಸೃಷ್ಟಿ ಮಾಡಿ ಪರಾವಲಂಭಿಯಾಗಿಸುವ ಶಿಕ್ಷಣಕ್ಕಿಂತ ಬದುಕಿನಲ್ಲಿನ ಸ್ವಾಭಿಮಾನಿ ಸ್ವಾವಲಂಭನೆ ಸಾಮರಸ್ಯದ ರಾಷ್ಟ್ರಾಭಿಮಾನ ರೂಪಿಸುವ ಶಿಕ್ಷಣ ನೀತಿ ಎಂದೋ ಆಗಬೇಕಾದ ಕಾರ್ಯ. ಈಗಲದರೂ ಹೊಸ ನೀತಿಯಲ್ಲಿ ಆದ್ಯತೆ ನೀಡುವುದು ಸ್ವಾಗತಾರ್ಹ ಎಂದು ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಸಬಲೀಕರಣ ಮತ್ತು ಕ್ರೀಡಾ ಸಚಿವ ಸಿ.ಟಿ. ರವಿ ಅವರು ತಿಳಿಸಿದ್ದಾರೆ.

ಶಿಕ್ಷಣವನ್ನು ಹೊರತುಪಡಿಸಿ ರಾಷ್ಟ್ರಕಟ್ಟಲು ಸಾಧ್ಯವಿಲ್ಲ ಶಿಕ್ಷಣದ ಅಭ್ಯುದಯದ ಜೊತೆ ಜೊತೆಗೆ ಸಮಾಜಮುಖಿ ರಾಷ್ಟ್ರೀಯ ಹಿತಾಸಕ್ತಿ ಗಟ್ಟಿಗೊಳಿಸುವ ಭಾರತದ ವೈವಿಧ್ಯತೆಯನ್ನು ಉಳಿಸಿ, ಏಕತೆಯನ್ನು ರೂಪಿಸುವ ತ್ರಿಭಾಷಾ ನೀತಿ, ಮಾತೃ ಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣ, ಭಾರತೀಯ ಭಾಷೆಗಳಿಗೆ ಆದ್ಯತೆ, ಕಲೆ, ಸಂಸ್ಕೃತಿ ಕೌಶಲ್ಯದ ಜೊತೆಗೆ ಆಟೋಟಗಳನ್ನು ಪಠ್ಯದ ಭಾಗವಾಗಿರಿಸಿರುವುದು ಹೊಸ ಶಿಕ್ಷಣ ನೀತಿಯ ಹೆಗ್ಗಳಿಕೆಯಾಗಿದೆ.

ಕೇಂದ್ರ ಸಕಾರ ಜಾರಿಗೆ ತಂದಿರುವ ನೂತನ ಶಿಕ್ಷಣ ನೀತಿ ಶಿಕ್ಷಣದ ಸ್ವರೂಪವನ್ನು ಬದಲಾಯಿಸುವ ಶೈಕ್ಷಣಿಕ ಲೋಪದೋಷಗಳನ್ನು ಸರಿಪಡಿಸಿ ನವಭಾರತದ ನಿರ್ಮಾಣಕ್ಕೆ ಗಟ್ಟಿ ತಳಪಾಯ ರೂಪಿಸುವ ಮೂಲಕ ಜನಕೇಂದ್ರಿತ ಭವ್ಯ ಭಾರತ ನಿರ್ಮಿಸುವ ನೀತಿಯಾಗಿವೆ. 34 ವರ್ಷಗಳ ಬಳಿಕ ಶೈಕ್ಷಣಿಕ ಸಾಧಕ ಬಾದಕಗಳನ್ನು ಅವಲೋಕೊಸಿ ಕರ್ನಾಟಕದವರೆ ಆದ ಶ್ರೀ ಕಸ್ತೂರಿ ರಂಗನ್, ಶ್ರೀ ಎಂ.ಕೆ ಶ್ರೀಧರ್ ಮೊದಲಾದವರನ್ನು ಒಳಗೊಂಡ ಸಮಿತಿ ಕೊಟ್ಟ ಶಿಫಾರಸ್ಸನ್ನು ಆಧರಿಸಿ ಜ್ಞಾನ, ಕೌಶಲ್ಯ ಮತ್ತು ಮೌಲ್ಯಾಧಾರಿತ ನೈತಿಕ ಶಿಕ್ಷಣ ನೀಡುವ ಹೊಸ ನೀತಿಯನ್ನು ಕೇಂದ್ರ ಸಚಿವ ಸಂಪುಟ ಪ್ರಧಾನಮಂತ್ರಿ ನರೇಂದ್ರಮೋದಿ ನೇತೃತ್ವದಲ್ಲಿ ಅನುಮೋದಿಸಿರುವುದನ್ನು ಸ್ವಾಗತಿಸುತ್ತೇನೆಂದು ಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಖ್ಯಮಂತ್ರಿಗಳಿಂದ ರಾಜ್ಯಪಾಲರ ಭೇಟಿ

ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)

ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪ, ಹಾಗೂ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರುಗಳು ಇಂದು ಕರ್ನಾಟಕ ರಾಜ್ಯಪಾಲ ವಜೂಭಾಯಿ ವಾಲ ಅವರನ್ನು ಭೇಟಿ ಮಾಡಿ ಪ್ರಸ್ತುತ ವಿದ್ಯಮಾನಗಳ ಬಗ್ಗೆ ಹಾಗೂ ಕೊರೋನಾ ಸಾಂಕ್ರಾಮಿಕ ಪಿಡುಗಿನ ಸ್ಥಿತಿ ಮತ್ತು ಸರ್ಕಾರವು ವೈರಸ್ ಪರೀಕ್ಷೆ ಹಾಗೂ ವರದಿ ಮಾಡಲು ಮತ್ತು ಚಿಕಿತ್ಸೆ ನೀಡಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಿದರು.

ಈ ಸಂದರ್ಭದಲ್ಲಿ ಗೌರವಾನ್ವಿತ ರಾಜ್ಯಪಾಲರು ಮುಖ್ಯಮಂತ್ರಿಗಳಿಗೆ ರಾಜ್ಯದಲ್ಲಿ ತಂಬಾಕು/ಗುಟ್ಕಾ/ಪಾನ್/ ಮಸಾಲಾ ಪ್ಯಾಕೆಟ್‌ಗಳಲ್ಲಿ ಮಾದಕ ದ್ರವ್ಯಗಳನ್ನು (ಡ್ರಗ್ಸ್) ಮಾರಾಡ ಮಾಡುತ್ತಿರುವ ಪ್ರಕರಣಗಳು ಕಂಡುಬಂದಿದ್ದು, ಇದರಿಂದಾಗಿ ರಾಜ್ಯದಲ್ಲಿನ ಯುವಕರು ಹಾಗೂ ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ

ಒಳಗಾಗುತ್ತಿದ್ದು, ಅವರ ಜೀವನಕ್ಕೆ ತೊಂದರೆ ಉಂಟಾಗುತ್ತಿರುವುದರಿಂದ ಈ ಪದಾರ್ಥಗಳ ಮಾರಾಟ ಮತ್ತು ವಿತರಣೆಯನ್ನು ನಿಷೇದಿಸಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿರುತ್ತಾರೆ.

ಮುಖ್ಯ ಮಂತ್ರಿಗಳು ಈ ವಿಷಯದ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿ, ಅಗತ್ಯವಿದ್ದಲ್ಲಿ ಸುಗ್ರೀವಾಜ್ಞೆ ಹೊರಡಿಸುವುದಾಗಿ ತಿಳಿಸಿದರು.

ರಾಜ್ಯಪಾಲರು ಮುಖ್ಯ ಮಂತ್ರಿಗಳಿಗೆ ಕೊರೋನಾ ವೈರಸ್ ರ್‍ಯಾಪಿಡ್ ಪರೀಕ್ಷೆ ಪ್ರಕ್ರಿಯೆಯನ್ನು ಕ್ಷಿಪ್ರಗೊಳಿಸುವಂತೆ ಹಾಗೂ ಆಯುರ್ವೇದಿಕ್ ಮತ್ತು ಹೋಮಿಯೋಪಥಿಕ್ ಔಷಧಿಗಳನ್ನು ವೈರಸ್ ನಿಯಂತ್ರಣಕ್ಕಾಗಿ ಬಳಸುವಂತೆ ಹಾಗೂ ಕೊರೋನಾ ಬಧಿತ ಪ್ರದೇಶಗಳಲ್ಲಿ ವಿತರಿಸಲು ಕ್ರಮ ವಹಿಸುವಂತೆ ಸೂಚಿಸಿದರು  ಎಂದು ಪ್ರಕಟಣೆ ತಿಳಿಸಿದೆ.

## Chief Minister meets Governor

Bengaluru, July 31 (Karnataka Information)

B.S Yediyurappa, Chief Minister and Basavaraja Bommai, Home Minister, Karnataka today met Vajubhai Vala, Governor of Karnataka and discussed about the present COVID-19 situation in Karnataka and explained the actions taken by the Government to control the COVID-19 and testing and reporting, treating process and also about the arrangements made by the Government in this regard.

Governor also suggested the Chief Minister to make arrangements for speed test, use of Ayurvedic Medicine and Homeopathy Medicine to control the CORONA in all affected area of the State.

During the discussion Governor suggested the chief Minister to ban the sale and distribution of tobacco/gutka/panmasala and all types of pouches, in which, in the name of gutka drugs are being sold in the State. Due to this youths and Students are getting addicted and they are in danger.

The Chief Minister said that the issue will be discussed and action will be taken and if necessary an Ordinance will be brought about this says official press release.

## ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ
## ಕನ್ನಡ ಅಧ್ಯಯನ ಪೀಠವನ್ನು ಮುಂದುವರೆಸಲು ಬದ್ಧ

– ಸಚಿವ ಸಿ.ಟಿ ರವಿ ಸ್ಪಷ್ಟನೆ

**ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)**

ನವದೆಹಲಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠವನ್ನು ಮುಂದುವರೆಸಲು ಸರ್ಕಾರ ಬದ್ಧವಾಗಿದೆ. ಈ ಸಂಬಂಧ ದಿನಾಂಕ:25.6..2020ರಂದು ಜೆ.ಎನ್.ಯು ವಿಶ್ವವಿದ್ಯಾಲಯದ ಉಪ ಕುಲಪತಿಗಳಿಗೆ ಪತ್ರ ಬರೆದು ಜೆ.ಎನ್.ಯು ಕನ್ನಡ ಅಧ್ಯಯನ ಪೀಠ ಮುಂದುವರೆಸಲು ಎಲ್ಲಾ ಅಗತ್ಯ ಕ್ರಮಕೈಗೊಳ್ಳಲು ಕೋರಲಾಗಿದೆ (ಪತ್ರ ಲಗತ್ತಿಸಿದೆ). ಇದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಎಲ್ಲಾ ರೀತಿಯ ಸಹಕಾರ ನೀಡಲು ಬದ್ಧವಾಗಿದೆ ಎಂಬ ವಿಷಯವನ್ನು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಉಪಕುಲಪತಿಗಳೊಂದಿಗೆ ಹಂಚಿಕೊಳ್ಳಲಾಗಿದೆ ಎಂದು ಸಚಿವ ಸಿ.ಟಿ ರವಿ ತಿಳಿಸಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವು ಪರಸ್ಪರ ಮಾಡಿಕೊಂಡ ಒಪ್ಪಂದದ ಮೇರೆಗೆ ಜೆ.ಎನ್.ಯು ಕನ್ನಡ ಅಧ್ಯಯನ ಪೀಠವು 2015ಅಕ್ಟೋಬರ್ 1 ರಿಂದ ಕಾರ್ಯಾರಂಭ ಮಾಡಿದೆ. ಈ ಒಪ್ಪಂದದ ಪ್ರಕಾರ ಇಲಾಖೆಯು ವಾರ್ಷಿಕವಾಗಿ 43 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅಲ್ಲದೇ ಜೆ.ಎನ್.ಯು ಕನ್ನಡ ಅಧ್ಯಯನ ಪೀಠದ ಕೋರಿಕೆಯಂತೆ ಸರ್ಕಾರವು 5 ಕೋಟಿ ರೂಪಾಯಿಗಳ ಆರ್ಥಿಕ ನೆರವನ್ನು ನೀಡಿದ್ದು, ಇದರಿಂದ ಲಭಿಸುವ ಬಡ್ಡಿಯಿಂದ ಕನ್ನಡ ಅಧ್ಯಯನ ಪೀಠವು ಕಾರ್ಯ ನಿರ್ವಹಿಸುತ್ತಿದೆ.

ಜೆ.ಎನ್.ಯು ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಪ್ರೊ॥ ಪುರುಷೋತ್ತಮ ಬಿಳಿಮಲೆಯವರು ಆಗಸ್ಟ್ 20 ರಂದು ನಿವೃತ್ತರಾಗುವುದರಿಂದ ಅವರ ಜಾಗಕ್ಕೆ ನಿಯಮಾನುಸಾರ ಹೊಸದಾಗಿ ಅರ್ಹರನ್ನು ನೇಮಕಾತಿ ಮಾಡಿಕೊಳ್ಳಲು ನಾನು ಜೂನ್ 25 2020ರಂದು ಜೆ.ಎನ್.ಯು ಉಪ ಕುಲಪತಿಗಳಿಗೆ ಪತ್ರ ಬರೆದು ಅಗತ್ಯ ಕ್ರಮಕೈಗೊಳ್ಳಲು ಕೋರಿರುತ್ತೇನೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದೆ. ಸದರಿಕೇಂದ್ರವು ಸ್ಥಗಿತಗೊಳ್ಳುತ್ತದೆ ಎಂಬ ವದಂತಿಯು ಕಲ್ಪಿತ ಸುದ್ದಿಯಾಗಿದ್ದು, ಕನ್ನಡಿಗರು ಆತಂಕ ಪಡುವ ಅಗತ್ಯವಿರುವುದಿಲ್ಲ.

ರಾಷ್ಟ್ರ ಮಟ್ಟದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿಕನ್ನಡ ಭಾಷೆ ಬೆಳವಣಿಗೆಯ ದೃಷ್ಟಿಯಿಂದ ಜೆ.ಎನ್.ಯು ಕನ್ನಡ ಅಧ್ಯಯನ ಪೀಠ ಪ್ರಧಾನ ಪಾತ್ರ ವಹಿಸುವುದರಿಂದ ಸದರಿ ಪೀಠಕ್ಕೆ ಸರ್ಕಾರ ಎಲ್ಲಾ ರೀತಿಯ ನೆರವು, ಸಹಕಾರವನ್ನು ನೀಡುತ್ತಾ ಬಂದಿದೆ. ನಾಡು–ನುಡಿ–ಸಂಸ್ಕೃತಿ ಬೆಳವಣಿಗೆಗೆ ಸಂಬಂಧ ಪಟ್ಟಎಲ್ಲಾ ವಿಚಾರಗಳಿಗೆ ಸ್ಪಂದಿಸಲು ಸರ್ಕಾರ ಬದ್ಧವಾಗಿದೆ ಎಂದು ಸಚಿವ ಸಿ.ಟಿ. ರವಿ ಸ್ಪಷ್ಟನೆ ನೀಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ರಾಜ್ಯಪಾಲರಿಂದ ಬಕ್ರೀದ್ ಹಬ್ಬದ ಶುಭಾಶಯಗಳು

ರಾಜ್ಯದ ಮುಸ್ಲಿಂ ಸಹೋದರರಿಗೆ ಬಕ್ರೀದ್ ಹಬ್ಬದ (ಈದ್ ಉಲ್ ಜುಹಾ) ಶುಭಾಶಯಗಳನ್ನು ಹಾರೈಸಿದ್ದಾರೆ. ಬಕ್ರೀದ್ ಇಸ್ಲಾಂ ನಂಬಿಕೆಯಲ್ಲಿ ಅಪಾರ ಪ್ರಾಮುಖ್ಯತೆ ಹೊಂದಿದ್ದು, ಇದು ತ್ಯಾಗದ ಹಬ್ಬವಾಹಿದೆ ಹಾಗೂ ಪ್ರವಾದಿಯ ಉದಾತ್ತ ಬೋಧನೆಗಳನ್ನು ಅನುಸರಿಸಲು ಹಾಗೂ ತ್ಯಾಗ–ಸಹಾನುಭೂತಿ–ಸಹಿಷ್ಣುತೆ ಮನೋಭಾವಗಳನ್ನು ಅಳವಡಿಸಿಕೊಳ್ಳುವಂತೆ ನೆನಪಿಸುತ್ತದೆ.

ಈ ವರ್ಷದ ಈದ್ ಉಲ್ ಜುಹಾ ಎಲ್ಲರಿಗೂ ಸಂತೋಷ ಹಾಗೂ ಸಮೃದ್ಧಿ ತಂದುಕೊಡಲಿ. ಸಮಾಜ ಇನ್ನಷ್ಟು ಬಲಿಷ್ಠಗೊಳ್ಳಲಿ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# Appeal

With Greetings of Eid-ul-Azha(Bakrid) the Chief Executive Office, Karnataka State Board of Auqaf appeals to community as follows.

As you all are well aware that in view of the pandemic, the holy Haj is being performed in a symbolic way with all precautionary measures maintaining social distancing.

In Karnataka about 1,25,000 COVID-19 positive case are reported and daily there is rise of about 4,000 to 5,000 positive cases with 80 to 100 deaths.

In the interest of individual safety, community and in the interest of Public Health at large, it is hereby appealed to pray Eid Namaz at home itself as far as possible.

Prayers at Edigahs and Open Spaces are strictly prohibited. Whereever prayers are offered in Masajid, safety norms should be strictly followed and the Eid Namaz should be concluded before 8-00 am says official press release.

ಚಿತ್ರ ಸುದ್ದಿ :

**ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಬಸವರಾಜ ಎಂ. ಕಂಬಿ ಅವರು ಇಂದು (31–07–2020) ವಯೋ ನಿವೃತ್ತಿ ಹೊಂದಿದ ಪ್ರಯುಕ್ತ ಇಲಾಖೆಯ ಸುಲೋಚನಾ ಚಿತ್ರಮಂದಿರದಲ್ಲಿ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಲಾಗಿತ್ತು. ಸಮಾರಂಭದಲ್ಲಿ ನಿವೃತ್ತ ನಿರ್ದೇಶಕ ಎನ್. ಭೃಂಗೀಶ್, ನಿವೃತ್ತ ಜಂಟಿ ನಿರ್ದೇಶಕ ಹೆಚ್. ಬಿ. ದಿನೇಶ್, ಇಲಾಖೆಯ ವಾಣಿಜ್ಯ ಪ್ರಚಾರ ಶಾಖೆಯ ಜಂಟಿ ನಿರ್ದೇಶಕ ಎ.ಆರ್. ಪ್ರಕಾಶ್, ಆಡಳಿತ ಮತ್ತು ಸುದ್ದಿ ಮತ್ತು ಪತ್ರಿಕಾ ಶಾಖೆಯ ಜಂಟಿ ನಿರ್ದೇಶಕ ಡಿ.ಪಿ. ಮುರುಳೀಧರ್ ಹಾಗೂ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಆಗಸ್ಟ್‌ನಲ್ಲಿ ಕರ್ನಾಟಕ ಶಿಕ್ಷಣ ನೀತಿ ಅಂತಿಮ: ಸುರೇಶ್ ಕುಮಾರ್

**ಬೆಂಗಳೂರು, ಜುಲೈ 31 (ಕರ್ನಾಟಕ ವಾರ್ತೆ)**

ದೇಶದಲ್ಲೇ ಕರ್ನಾಟಕವು ನೂತನ ರಾಷ್ಟ್ರೀಯ ಶಿಕ್ಷಣ ನೀತಿ–ಎನ್‌ಇಪಿ–2019ನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲಿರುವ ಮೊದಲ ರಾಜ್ಯಗಳಲ್ಲಿ ಒಂದಾಗಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದ್ದಾರೆ.

ನೂತನ ರಾಷ್ಟ್ರೀಯ ನೀತಿ ಅನುಮೋದನೆಗೊಂಡ ನಂತರ ಶುಕ್ರವಾರ ಕರಡು ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿ ಅಧ್ಯಕ್ಷ ಡಾ. ಕೆ. ಕಸ್ತೂರಿರಂಗನ್ ಅವರೊಂದಿಗೆ ವೆಬಿನಾರ್ ಮೂಲಕ ಮಾತನಾಡಿದ ಅವರು, ವಿವಿಧ ಸ್ತರಗಳ, ನಾನಾ ಅಂತರಗಳಿರುವ ಈ ರಾಷ್ಟ್ರದ ಎಲ್ಲರಿಗೂ ಅನ್ವಯವಾಗಬಹುದಾದ ನೂತನ ಶಿಕ್ಷಣ ನೀತಿಯನ್ನು ಶ್ರಮವಹಿಸಿ ರೂಪಿಸಿದ್ದಕ್ಕೆ ಕಸ್ತೂರಿರಂಗನ್ ಅವರಿಗೆ ಕರ್ನಾಟಕ ಸರ್ಕಾರದ ಪರವಾಗಿ ಧನ್ಯವಾದ ಅರ್ಪಿಸಿದರು.

34 ವರ್ಷಗಳ ಬಳಿಕ ಇಂದಿನ ಹಾಗೂ ಭವಿಷ್ಯದ ಶೈಕ್ಷಣಿಕ ಸವಾಲುಗಳನ್ನು ಗಮನದಲ್ಲಿಟ್ಟುಕೊಂಡು ರೂಪಿಸಲಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿ ಸಮಗ್ರ ನೀತಿಯಾಗಿದೆ. ಇದು ಸರ್ವರಿಗೂ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ಸಮಾಜವನ್ನು ಒಂದು ಸುಸ್ಥಿರ, ಸಮಾನ ಹಾಗೂ ಜೀವಂತಿಕೆಯುಳ್ಳ ಸಮಾಜವನ್ನಾಗಿ ಮಾರ್ಪಡಿಸಲು ಶ್ರಮಿಸುವಂತಹ ಒಂದು ಗಟ್ಟಿಯಾದ ನೀತಿಯಾಗಿದೆ. ಇಂತಹ ನೀತಿಯನ್ನು ಅನುಷ್ಠಾನಗೊಳಿಸಲು ಕರ್ನಾಟಕ ಸರ್ಕಾರ ಉತ್ಸುಕವಾಗಿದೆ ಎಂದು ಸಚಿವರು ಹೇಳಿದರು.

**ಕರ್ನಾಟಕ ನನ್ನ ರಾಜ್ಯ:** ಕೇರಳ ನನ್ನ ಜನ್ಮಭೂಮಿಯಾಗಿದ್ದರೂ ಕರ್ನಾಟಕ ನನ್ನ ಕರ್ಮಭೂಮಿ, ಕರ್ನಾಟಕ ನನ್ನ ರಾಜ್ಯ ಎಂದು ಹೆಮ್ಮೆಯಿಂದ ಹೇಳಿದ ಕಸ್ತೂರಿರಂಗನ್, ಭಾರತ ದೇಶ ವಿವಿಧ ರೀತಿಯ ಸಾಮಾಜಿಕ, ಭಾಷೆ, ಧರ್ಮ, ಸಂಸ್ಕೃತಿ, ಗ್ರಾಮೀಣ, ನಗರ, ಗುಡ್ಡಗಾಡು, ಅಭಿವೃದ್ಧಿ ಹೊಂದಿದ, ಹಿಂದುಳಿದ ಪ್ರದೇಶಗಳಂತಹ ಹಲವು ಸ್ತರಗಳ ಪ್ರದೇಶಗಳನ್ನೊಳಗೊಂಡಿದ್ದು, ಮುಂದಿನ 20 ವರ್ಷಗಳಲ್ಲಿ ದೇಶವು ಕ್ಷಿಪ್ರವಾಗಿ ಅಭಿವೃದ್ಧಿ ಹೊಂದುವ ನಿಟ್ಟಿನಲ್ಲಿ ಹೊಸ ಶಿಕ್ಷಣ ನೀತಿಯನ್ನು ರೂಪಿಸಲಾಗಿದೆ ಎಂದು ಅವರು ಹೇಳಿದರು.

ತಾವು ಕರ್ನಾಟಕದಲ್ಲಿ ಕಳೆದ ದಿನಗಳನ್ನು ಸ್ಮರಿಸಿಕೊಂಡ ಕಸ್ತೂರಿ ರಂಗನ್, ನಾಡಿನ ಶೈಕ್ಷಣಿಕ ಅಭಿವೃದ್ಧಿಯ ನಿಟ್ಟಿನಲ್ಲಿ ತಮ್ಮ ಉತ್ಸುಕತೆ, ಆಸಕ್ತಿ ಮೆಚ್ಚುವಂತಹದ್ದಾಗಿದ್ದು, ಕರ್ನಾಟಕ ಈಗಾಗಲೇ ಶೈಕ್ಷಣಿಕವಾಗಿ ಇಡೀ ದೇಶದಲ್ಲೇ ಮಂಚೂಣಿಯಲ್ಲಿರುವುದನ್ನು ರಾಷ್ಟ್ರ ಗಮನಿಸಿದೆ ಎಂದರು ಶ್ಲಾಘನೆ ವ್ಯಕ್ತಪಡಿಸಿದರು.

ಕರ್ನಾಟಕದಲ್ಲಿ ಈಗಾಗಲೇ ಅನುಷ್ಠಾನದಲ್ಲಿರುವ ಬಹುತೇಕ ಸಂಗತಿಗಳು ಹೊಸ ಶಿಕ್ಷಣ ನೀತಿಯಲ್ಲಿ ಅಳವಡಿಕೆಯಾಗಿದ್ದು, ಈ ಹೊಸ ನೀತಿಯಲ್ಲಿ ಕರ್ನಾಟಕದ ಕೊಡುಗೆ ಅಪಾರವಾಗಿದೆ. ದೇಶದ ಶಿಕ್ಷಣ ವ್ಯವಸ್ಥೆಯು ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಯೋಜನಗಳನ್ನು ಪಡೆಯುವ ಮುನ್ನವೇ ದೂರದೃಷ್ಟಿಯ ಧ್ಯೇಯಗಳನ್ನು ಅಳವಡಿಸಿಕೊಂಡ ಕರ್ನಾಟಕ ಇತರೆ ರಾಜ್ಯಗಳಿಗಿಂತ ಮುಂದಿದೆ ಎಂದು ಹೇಳಿದ ಕಸ್ತೂರಿ ರಂಗನ್, ಸಮಿತಿ ಸದಸ್ಯರಾದ ಕರ್ನಾಟಕದವರೇ ಆದ ಪ್ರೊ. ಎಂ.ಕೆ. ಶ್ರೀಧರ್ ಅವರ ಸೇವೆಯನ್ನು ಶ್ಲಾಘಿಸಿ, ಸಮಿತಿ ರೂಪಿಸಿದ ಈ ವರದಿಯ ರೂಪುರೇಷೆ ಸಿದ್ಧಪಡಿಸಲು ಅವರ ಕೊಡುಗೆಯನ್ನು ಅತ್ಯಂತ ಖುಷಿಯಿಂದ ವಿವರಿಸಿ ಸಮಿತಿಯಲ್ಲಿ ಅತ್ಯಂತ ಕೇಂದ್ರೀಕೃತ ಪಾತ್ರ ನಿರ್ವಹಿಸಿದರು ಎಂದರು.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ದೇಶದಲ್ಲಿ ಶೈಕ್ಷಣಿಕ ಕ್ರಾಂತಿಯೇ ಆಗಲಿದ್ದು, ಅದು ಕರ್ನಾಟಕದಿಂದಲೇ ಆರಂಭವಾಗಲಿದೆ ಎಂಬ ನಂಬುಗೆ ನನ್ನದಾಗಿದೆ ಎಂದು ಕಸ್ತೂರಿರಂಗನ್ ಆಶಯ ವ್ಯಕ್ತಪಡಿಸಿದರು.

**ಆಗಸ್ಟ್‌ನಲ್ಲಿ ಜಾರಿಗೆ ತರಲು ಕ್ರಮ:** ಹೊಸ ಶಿಕ್ಷಣ ನೀತಿ ಜಾರಿಗೊಳಿಸುವ ಕುರಿತಂತೆ ಅಧಿಕಾರಿಗಳ ಸಭೆ ನಡೆಸಿ ಸಮಗ್ರವಾಗಿ ಚರ್ಚೆ ನಡೆಸಿದ ಸುರೇಶ್ ಕುಮಾರ್, ಕರ್ನಾಟಕದ ಅವಶ್ಯಕತೆಗಳಿಗನುಗುಣವಾಗಿ ಇದಕ್ಕೆ ಪೂರಕವಾದ ರೂಪುರೇಷೆ ಸಿದ್ಧಪಡಿಸಬೇಕೆಂದು ಸೂಚಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ ರೂಪುರೇಷೆ ಪ್ರಕಟಗೊಂಡಿದ್ದು, ಇಡೀ ದೇಶದ ಶಿಕ್ಷಣ ವ್ಯವಸ್ಥೆಗೆ ಹೊಸ ದಿಕ್ಕ ತೋರಿಸಿದೆ. ಸ್ವಾತಂತ್ರ್ಯನಂತರ ಕೇವಲ ಎರಡೇ ಬಾರಿ ಶಿಕ್ಷಣ ನೀತಿ ಪರಿಷ್ಕರಣೆಗೊಂಡಿರುವುದು ಮತ್ತು ಇಂದಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ರೀತಿಯಲ್ಲಿ ಕೇಂದ್ರ ಸರ್ಕಾರವು ನೀತಿಯನ್ನು ಪ್ರಕಟಿಸಿರುವುದು ನಮ್ಮ ಸರ್ಕಾರದ ಜವಾಬ್ದಾರಿಯನ್ನು ಹೆಚ್ಚಿಸಿದೆ. ಇದೇ ಫೆಬ್ರವರಿಯಲ್ಲಿ ಕರ್ನಾಟಕಕ್ಕೆ ವಿಶೇಷ ಶಿಕ್ಷಣ ನೀತಿ ರೂಪಿಸಲು ಸಮಿತಿ ರಚಿಸಲಾಗಿದ್ದು, ಈಗ ರೂಪುರೇಷೆ ಸಿದ್ಧಗೊಳಿಸಲಿದೆ. 15 ದಿನಗಳ ಅವಧಿಯಲ್ಲಿ ಕೇಂದ್ರದ ನೀತಿಯನ್ನು ಹಾಗೂ ರಾಜ್ಯದ ನೀತಿಯನ್ನು ಅಭ್ಯಸಿಸಿ ಕರ್ನಾಟಕದ ಶಿಕ್ಷಣ ನೀತಿಯನ್ನು ಹೊರತರಲು ಕ್ರಮ ವಹಿಸಬೇಕು. ಹಾಗೆಯೇ ಆಗಸ್ಟ್ 20ಕ್ಕೆ ಲೋಕಾರ್ಪಣೆಗೊಳಿಸುವ ಸಾಧ್ಯತೆಗಳ ಕುರಿತು ಆಲೋಚಿಸಬೇಕು ಎಂದು ಸುರೇಶ್ ಕುಮಾರ್ ಹೇಳಿದರು.

ಸಭೆಯಲ್ಲಿ ವಿಧಾನಪರಿಷತ್ತಿನ ಸದಸ್ಯರಾದ ಅರುಣ್ ಶಹಾಪುರ, ಡಾ. ವೈ.ಎ.ನಾರಾಯಣಸ್ವಾಮಿ, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ಸಾಶಿಇ ಆಯುಕ್ತ ಡಾ. ಕೆ.ಜಿ. ಜಗದೀಶ್, ಸಮಗ್ರ ಶಿಕ್ಷಣ– ಕರ್ನಾಟಕ ಯೋಜನಾ ನಿರ್ದೇಶಕಿ ದೀಪಾಚೋಳನ್, ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು ಎಂದು ಪ್ರಕಟಣೆ ತಿಳಿಸಿದೆ.